## ನಿಮ್ಮೊಡನೆ

# ಲಿಂಗಭೇದದ ವಿರುದ್ಧ ಜಾರಿಯಿರಲಿ ಹೋರಾಟ ಮನೆಗಳಲ್ಲಿ ನಡೆಯಲಿ ಲಿಂಗಸಂವೇದನೆ ಪಾಠ

**ಲಿಂಗಭೇದದ ಪ್ರಯೋಗಶಾಲೆಗಳಾಗಿ ನಮ್ಮ ಮನೆಗಳೇ ಸಕ್ರಿಯವಾಗಿರುವಾಗ, ಸಮಾಜದಲ್ಲಿನ ಲಿಂಗ ತಾರತಮ್ಯವನ್ನು ಕೊನೆಗಾಣಿಸುವುದು ಸುಲಭವಲ್ಲ. ಶಾಲಾ ಪರಿಸರ ಹಾಗೂ ಶಿಕ್ಷಣ ವ್ಯವಸ್ಥೆಯೂ ಕೆಲವು ಸಂದರ್ಭಗಳಲ್ಲಿ ಲಿಂಗಸಂವೇದನೆಗೆ ಕುರುಡಾಗಿವೆ.**

ಸೇನೆಯ ನರ್ಸಿಂಗ್ ಸೇವೆಯಲ್ಲಿ ಕಾಯಂ ಉದ್ಯೋಗಿಯಾಗಿದ್ದ ಸೆಲಿನಾ ಜಾನ್ ಮಹಿಳಾ ಅಧಿಕಾರಿಯೊಬ್ಬರನ್ನು, ಮದುವೆ ಮಾಡಿಕೊಂಡ ಕಾರಣಕ್ಕೆ ಕೆಲಸದಿಂದ ತೆಗೆದುಹಾಕಲಾಗಿದೆ. ಹಳೆಯ ನಿಯಮಗಳನ್ನು ಉಲ್ಲೇಖಿಸಿ ಸೇನೆ ತೆಗೆದುಕೊಂಡಿರುವ ಈ ಕ್ರಮ ಸ್ವೇಚ್ಛೆ ಹಾಗೂ ಲಿಂಗತಾರತಮ್ಯದಿಂದ ಕೂಡಿರುವಂತಹದ್ದು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟ ಮಾತುಗಳಲ್ಲಿ ಹೇಳಿರುವುದು ಸರಿಯಾಗಿದೆ. ಸೆಲಿನಾ ಅವರಿಗೆ ಪೂರ್ಣ ಪ್ರಮಾಣದ ಪರಿಹಾರವಾಗಿ 60 ಲಕ್ಷ ರೂಪಾಯಿ ನೀಡಬೇಕೆಂದು ನ್ಯಾಯಪೀಠ ಆದೇಶಿಸಿದೆ. ಲಿಂಗಾಧಾರಿತ ಪಕ್ಷಪಾತ ಮಾಡುವ ಕಾನೂನು ಅಥವಾ ನಿಯಮಗಳಿಗೆ ಸಂವಿಧಾನದ ಮಾನ್ಯತೆಯಿಲ್ಲ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಇಂಥ ನಿಯಮಗಳನ್ನು ಒಪ್ಪಿಕೊಳ್ಳುವ ಮೂಲಕ ಮಾನವನ ಘನತೆಯನ್ನು ಕುಗ್ಗಿಸಿದಂತಾಗುತ್ತದೆ ಎಂದೂ ಹೇಳಿದೆ.

1992ರವರೆಗೂ ಮಹಿಳೆಯರಿಗೆ ಸಶಸ್ತ್ರ ಪಡೆಗಳಲ್ಲಿ ಅವಕಾಶ ಇರಲಿಲ್ಲ. ನಂತರವೂ ಹುದ್ದೆಯಲ್ಲಿ ಮೇಲೇರದಂತೆ– ಕಮಾಂಡರ್ ಸ್ಥಾನಕ್ಕೆ ಬಾರದಂತೆ– ಮಹಿಳೆಯರನ್ನು ತಡೆಯಲಾಗಿತ್ತು. 2010ರಲ್ಲಿ, ಕಮಾಂಡರ್ ಸೇರಿದಂತೆ ಸೇನೆ ಹಾಗೂ ಸರ್ಕಾರದಲ್ಲಿನ ಕಾಯಂ ಸೇವೆಯ ಹುದ್ದೆಗಳಿಗೆ ಮಹಿಳೆಯರನ್ನು ನೇಮಿಸಬೇಕು ಎಂದು ದೆಹಲಿ ಹೈಕೋರ್ಟ್ ಆದೇಶಿಸಿದರೂ, ಆ ತೀರ್ಪನ್ನು ಸುಪ್ರೀಂ ಕೋರ್ಟ್‌ನಲ್ಲಿ ಕೇಂದ್ರ ಸರ್ಕಾರ ಪ್ರಶ್ನಿಸಿತ್ತು. ಹತ್ತು ವರ್ಷಗಳ ವಿಚಾರಣೆಯ ನಂತರ 2020ರಲ್ಲಿ ದೆಹಲಿ ಹೈಕೋರ್ಟ್ ತೀರ್ಪನ್ನು ಎತ್ತಿಹಿಡಿದಿದ್ದ ಸುಪ್ರೀಂ ಕೋರ್ಟ್, ಭಾರತೀಯ ಸೇನೆಯಲ್ಲಿ ಮಹಿಳಾ ಅಧಿಕಾರಿಗಳ ಅವಕಾಶಗಳಿಗೆ ಇದ್ದ ಮಿತಿಯನ್ನು ತೆಗೆದುಹಾಕಿತ್ತು. ಸುಪ್ರೀಂ ಕೋರ್ಟ್ ಮಧ್ಯಪ್ರವೇಶದಿಂದಾಗಿಯೇ 'ರಾಷ್ಟ್ರೀಯ ರಕ್ಷಣಾ ಅಕಾಡೆಮಿ'ಯಲ್ಲಿ ಮಹಿಳೆಯರ ಸೇರ್ಪಡೆಗೆ ಅವಕಾಶ ದೊರೆತಿದೆ. ಇಷ್ಟೆಲ್ಲ ಘಟನೆಗಳ ನಂತರವೂ ಸೇನೆಯಲ್ಲಿ ಲಿಂಗತಾರತಮ್ಯ ಕೊನೆಗೊಂಡಿಲ್ಲ ಎನ್ನುವುದನ್ನು ಸೆಲಿನಾ ಜಾನ್ ಪ್ರಕರಣ ಸೂಚಿಸುವಂತಿದೆ.

ಸೇನೆಯಲ್ಲಿಯೇ ಕೊರತೆಯಿರುವ ಲಿಂಗಸಂವೇದನೆಯನ್ನು ಸಮಾಜದಲ್ಲಿ ನಿರೀಕ್ಷಿಸಲಾದೀತೆ? ನಮ್ಮ ಸುತ್ತಮುತ್ತಲೂ ಲಿಂಗಸೂಕ್ಷ್ಮತೆಯಿಲ್ಲದ ನಡವಳಿಕೆಗಳ ನಿರ್ಲಜ್ಜ ಪ್ರದರ್ಶನಗಳು ಆಗಾಗ ನಡೆಯುತ್ತಿರುತ್ತವೆ. ಕನ್ನಡದ ತಾರಾ ವರ್ಚಸ್ಸಿನ ನಟರೊಬ್ಬರು ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತ, 'ಇವತ್ತು ಇವಳು ಇರುತ್ತಾಳೆ, ನಾಳೆ ಅವಳು ಇರುತ್ತಾಳೆ' ಎಂದು ಇತ್ತೀಚೆಗಷ್ಟೇ ಹೇಳಿದ್ದಾರೆ. 'ಮೀ ಟು' ಪ್ರಕರಣದಲ್ಲಿ ದನಿಯೆತ್ತಿದ್ದ ಕನ್ನಡದ ಕಲಾವಿದೆಯೊಬ್ಬರನ್ನು ಲೇವಡಿ ಮಾಡುವ ಗೀತೆಯನ್ನು ನಿರ್ದೇಶಕರೊಬ್ಬರು ತಮ್ಮ ಸಿನಿಮಾದಲ್ಲಿ ಅಳವಡಿಸಿರುವುದು ಸುದ್ದಿಯಾಗಿದೆ. ಆ ಸಿನಿಮಾದ ನಾಯಕನಟ ರಾಜಕಾರಣದಲ್ಲಿ ಇರುವವರು. ಜವಾಬ್ದಾರಿ ಸ್ಥಾನದಲ್ಲಿರುವವರ ನಡವಳಿಕೆಗಳು ಜನಸಾಮಾನ್ಯರಿಗೆ ಮಾದರಿಯಾಗಬೇಕು. ದುರದೃಷ್ಟವಶಾತ್, ವಿನೋದ ಹಾಗೂ ಮನರಂಜನೆಯ ಹೆಸರಿನಲ್ಲಿ ಹೆಣ್ಣನ್ನು ಅಪಮಾನಿಸುವ ಕೃತ್ಯಗಳು ನಿರಂತರವಾಗಿ ವರದಿಯಾಗುತ್ತಲೇ ಇವೆ.

ಸಮಾಜದಲ್ಲಿ ಲಿಂಗಸಂವೇದನೆ ಜಡಗೊಂಡಿರುವುದಕ್ಕೆ ನಿದರ್ಶನದ ರೂಪದಲ್ಲಿ ಕನ್ನಡ ಕಿರುತೆರೆಯಲ್ಲಿನ ಇತ್ತೀಚಿನ 'ಬಿಗ್ ಬಾಸ್' ರಿಯಾಲಿಟಿ ಶೋನಲ್ಲಿ ಮಹಿಳಾ ಸ್ಪರ್ಧಿಯೊಬ್ಬರನ್ನು ಮನೆಯೊಳಗೆ ಹಾಗೂ ಹೊರಗೆ ನಡೆಸಿಕೊಂಡ ರೀತಿಯನ್ನು ಗಮನಿಸಬಹುದು. ಪುರುಷ ಸ್ಪರ್ಧಿಗಳ ಒರಟು ಮಾತು ಹಾಗೂ ಪಶು ಪ್ರವೃತ್ತಿಯನ್ನು ಗಟ್ಟಿಧ್ವನಿಯಲ್ಲಿ ಮಹಿಳಾಸ್ಪರ್ಧಿ ವಿರೋಧಿಸಿದ್ದು ಅಹಂಕಾರದ ರೂಪದಲ್ಲಿ ಬಿಂಬಿತವಾಯಿತು. ಮನೆಯೊಳಗಿನ ಇತರ ಮಹಿಳಾ ಸದಸ್ಯರು 'ಹೆಣ್ಣನ'ದ ಸುರಕ್ಷಿತ ಚೌಕಟ್ಟಿನೊಳಗೆ ನಿಂತು, ಸಹಸ್ಪರ್ಧಿಯ ದಿಟ್ಟತನವನ್ನು ಸಮಯಸಾಧಕತನ, ಅಹಂಕಾರ ಎಂದು ವಿಶ್ಲೇಷಿಸಿದರು. ಸಾಮಾಜಿಕ ಜಾಲತಾಣಗಳಲ್ಲಿ ಕೂಡ ಮಹಿಳಾ ಸ್ಪರ್ಧಿಯ ಸ್ವಾಭಿಮಾನ ಹಾಗೂ ಆತ್ಮವಿಶ್ವಾಸವನ್ನು ಅಹಂಕಾರ ಹಾಗೂ ಸ್ವಾರ್ಥ ಎಂದು ಹೆಸರಿಸಲಾಯಿತು. ಇವೆಲ್ಲ ಟೀಕೆಟಿಪ್ಪಣಿ, ಪುರುಷಪ್ರಧಾನ ಸಮಾಜದ ಸಿದ್ಧ ಮಾದರಿಗಳಿಗೆ ಭಂಗವಾದಾಗ ಭುಗಿಲೇಳುವ ಸಹಜ ಪ್ರತಿಕ್ರಿಯೆಗಳಾಗಿವೆ. ಸದ್ಯ, ಜನಪ್ರಿಯಗೊಂಡಿರುವ 'ಕರಿಮಣಿ ಮಾಲೀಕ ನೀನಲ್ಲ' ಎನ್ನುವ ರೀಲ್ಸ್‌ನಲ್ಲಿ ವ್ಯಂಗ್ಯ–ವಿಡಂಬನೆಗಿಂತಲೂ ಮಿಗಿಲಾಗಿ, ಕರಿಮಣಿಯ ನೆಪದಲ್ಲಿ ಪುರುಷನಿಗೆ ಮಹಿಳೆ ಅಧೀನಳು ಎಂದು ಹೇಳುವ ಮನೋಭಾವ ಎದ್ದುಕಾಣಿಸುತ್ತದೆ.

ಲಿಂಗಭೇದದ ಪ್ರಯೋಗಶಾಲೆಗಳಾಗಿ ನಮ್ಮ ಮನೆಗಳೇ ಸಕ್ರಿಯವಾಗಿರುವಾಗ, ಸಮಾಜದಲ್ಲಿನ ಲಿಂಗ ತಾರತಮ್ಯವನ್ನು ಕೊನೆಗಾಣಿಸುವುದು ಸುಲಭವಲ್ಲ. ಶಾಲಾ ಪರಿಸರ ಹಾಗೂ ಶಿಕ್ಷಣ ವ್ಯವಸ್ಥೆಯೂ ಕೆಲವು ಸಂದರ್ಭಗಳಲ್ಲಿ ಲಿಂಗಸಂವೇದನೆಗೆ ಕುರುಡಾಗಿವೆ. ಶತಮಾನಗಳಿಂದ ವ್ಯವಸ್ಥಿತವಾಗಿ ಪೋಷಣೆಗೊಂಡು ಬಂದಿರುವ ಲಿಂಗಭೇದದ ವಿರುದ್ಧ ವೈಯಕ್ತಿಕ ಹಾಗೂ ಸಾರ್ವತ್ರಿಕ ನೆಲೆಗಳಲ್ಲಿ ವ್ಯವಸ್ಥಿತ ಹೋರಾಟ ನಡೆಯಬೇಕಾಗಿದೆ. ಪ್ರಸಿದ್ಧ ವ್ಯಕ್ತಿಗಳು ಕೊಳಕಾಗಿ ಮಾತನಾಡಿದಾಗ, ಎಷ್ಟೇ ದೊಡ್ಡವರಾದರೂ ಅವರ ಸಣ್ಣತನವನ್ನು ಗಟ್ಟಿ ಧ್ವನಿಯಲ್ಲಿ ಹೇಳಬೇಕಾಗಿದೆ.

ಲಿಂಗಸಂವೇದನೆಗೆ ಸಂಬಂಧಿಸಿದ ಅಂತರಂಗ ಶುದ್ಧಿ ಬಹಿರಂಗ ಶುದ್ಧಿಗಳು ಒಮ್ಮೆಗೇ ಸಾಧ್ಯವಾಗುವಂತಹ ಬದಲಾವಣೆಗಳಲ್ಲ. ಆ ಬದಲಾವಣೆ, ನಿರಂತರ ಪ್ರಯತ್ನದಿಂದ ಒಳಗು ಹಾಗೂ ಹೊರಗನ್ನು ಮಾನವೀಯಗೊಳಿಸುವ ಸೃಜನಶೀಲ ಪ್ರಕ್ರಿಯೆಯಾಗಿದೆ.

■ ರಘುನಾಥ ಚ.ಹ.



ಈಶ್ವರ್